ಹರ್ಕ್ಯುಲಸ್‌ನ ಹನ್ನೊಂದನೆಯ ಸಾಹಸದಲ್ಲಿ ಅಟ್ಲಸ್‌ನನ್ನು ಭೇಟಿಯಾಗುತ್ತಾನೆ. ಆ ಹೊತ್ತಿಗೆ ಇಡೀ ಸ್ವರ್ಗವನ್ನು ಬೆನ್ನಮೇಲೆ ಹೊತ್ತು ಮಂಡಿಯೂರಿ ಕುಳಿತಿರುತ್ತಾನೆ. ಹರ್ಕ್ಯುಲಸ್, ಅಟ್ಲಸ್‌ನನ್ನು ಕೇಳಿದ ಮೊದಲ ನೆರವು – 'ಆ ಹಾವನ್ನು ಕೊಲ್ಲು, ಅನಂತರ ನಾನು ಸೇಬು ತರುತ್ತೇನೆ' ಎಂದು. 'ಹಾಗಾದರೆ ನನ್ನ ಮೇಲೆ ಹೊತ್ತಿರುವ ಸ್ವರ್ಗದ ಭಾರವನ್ನು ಇಳಿಸಿ, ಕ್ಷಣಕಾಲ ನೀನು ಹೊತ್ತುಕೋ' ಎಂದು ಹೇಳಿ ಒಡನೆಯೇ ಸ್ವರ್ಗವನ್ನು ವರ್ಗಾಯಿಸಿ ಚಿನ್ನದ ಸೇಬನ್ನು ತರುತ್ತಾನೆ. ತಾನೇ ಆ ಸೇಬನ್ನು ಯೂರಿಸ್ಥೂಸ್‌ಗೆ ನೀಡಲು ಮುಂದಾಗುತ್ತಾನೆ. ಇವನ ಕಪಟನಾಟಕವನ್ನು ಅರಿತ ಹರ್ಕ್ಯುಲಸ್ ಆಗಲಿ ಎಂದವನೇ 'ಈ ಭಾರವನ್ನು ಹೊರಲು ನಾನು ತಲೆಯ ಮೇಲೆ ಸಿಂಬೆ ಸುತ್ತಿಕೊಳ್ಳಬೇಕು' ಎಂದು ಹೇಳಿ ನೋಡನೋಡುತ್ತಲೇ ಮರೆಯಾಗಿ ಹೋಗಿಬಿಡುತ್ತಾನೆ. ಅಟ್ಲಸ್ ಆ ಭಾರವನ್ನು ಇನ್ನೂ ಹೊರುತ್ತಿದ್ದಾನಂತೆ. ಆ ಜಾಗ ಯಾವುದು? ಅದು ಇಂದು ಆಫ್ರಿಕದ ವಾಯುವ್ಯ ಭಾಗದಲ್ಲಿರುವ ಅಟ್ಲಾಸ್ ಪರ್ವತಶ್ರೇಣಿ.

ಸ್ವರ್ಗದ ಭಾರವನ್ನು ಭೂಮಿಯ ಮೇಲಿರುವ ಈ ಪರ್ವತಗಳು ತಾಳಿಕೊಳ್ಳಬೇಕಲ್ಲ? ಮಹಾಕವಿ ಹೋಮರ್ ತನ್ನ ಮಹಾಕಾವ್ಯ 'ಒಡಿಸ್ಸಿ'ಯಲ್ಲಿ ಅಟ್ಲಸ್ ಕುರಿತು, 'ಅವನೊಬ್ಬ ಮಹಾವೀರ, ಎಲ್ಲ ಸಮುದ್ರದ ಆಳವೂ ಅವನಿಗೆ ಗೊತ್ತಿತ್ತು. ಭೂಮಿ, ಸಾಗರಗಳ ಮಧ್ಯೆ ಮಹಾಸ್ತಂಭ ಕಟ್ಟಿದ್ದು ಅಟ್ಲಾಂಟಿಸ್ ಎಂಬ ಸಾಗರದಲ್ಲಿ' ಎಂದು ವರ್ಣಿಸುತ್ತಾನೆ. ಆ ಸಾಗರಕ್ಕೆ ಅಟ್ಲಾಂಟಿಕ್ ಎಂದು ಹೆಸರು ಬಂದದ್ದು ಕೂಡ ಅಟ್ಲಸ್‌ನಿಂದಲೇ. ತತ್ವಜ್ಞಾನಿ ಪ್ಲೇಟೋ, ಅಟ್ಲಸ್‌ನನ್ನು ದ್ವೀಪದ ಒಡೆಯ ಎಂದು ವರ್ಣಿಸಿದ್ದಾನೆ. ಅಟ್ಲಸ್ ಹೊತ್ತದ್ದು ಸ್ವರ್ಗವನ್ನು. ಆದರೆ ಸ್ವರ್ಗಕ್ಕೆ ಆಕಾರ ಬೇಡವೆ? ಗುಂಡನೆಯ ಚೆಂಡಿನಂತೆ ಸ್ವರ್ಗವನ್ನು ಕಲ್ಪಿಸಲಾಯಿತು. ಆದರೆ ಕಲಾವಿದರು ಕೊಟ್ಟಿರುವೇ ಬೇರೆ. ಇಟಲಿಯ ನೇಪಲ್ಸ್‌ನಲ್ಲಿರುವ



## ಭೂಮಿತಾಯಿಗೆ ಎಷ್ಟೊಂದು ಹೆಸರು!

ಮನುಷ್ಯ ಮತ್ತು ಭೂಮಿಯ ಸಂಬಂಧ, ತಾಯಿ ಮಕ್ಕಳ ಸಂಬಂಧ; ಮರ್ತ್ಯರು ಮತ್ತು ದೇವತೆಗಳ ಸಂಬಂಧ. ಇದಕ್ಕೆ ನಿದರ್ಶನವೆಂಬಂತೆ ಭೂಮಿಗೆ ಸಂದಿರುವ ಹಲವು ಹೆಸರುಗಳನ್ನು ಗಮನಿಸಬಹುದು.

| | | | | | | | |
|---|---|---|---|---|---|---|---|
| ಇಲ | ಕ್ಷಿತಿವಧು | ಜಲರಶನೆ | ಧರಾಧಾರೆ | ಪುಣ್ಯಭೂಮಿ | ಮಟ್ಟಿ | ರತ್ನವಸಿರ್ | ಶಾರ್ವರಿ |
| ಇಳೆ | ಕುಂಬಿನಿ | ತಿರ್‍ಯಕ್‌ಲೋಕ | ಧರೆ | ಪೊಡವಿ | ಮಣ್ಣು | ರಸನೆ | ಶೈಲಧರೆ |
| ಇಲೆ | ಕುವ | ತಿರೆ | ಧರಿತ್ರಿ | ಬುವಿ | ಮರ್ತ್ಯಲೋಕ | ರಸಾ | ಸಮುದ್ರವಸನ |
| ಈಡ | ಕುವಲಯ | ಧನಸ್ | ಧಾತ್ರಿ | ಭುವನ | ಮೃತ | ರಸೆ | ಸರ್ವಂಸಹ |
| ಉರ್ಬರೆ | ಕ್ಷೋಣಿ | ಧನ್ವಾ | ಧೇನು | ಭೂ | ಮೃತ್ತಿಕಾ | ರೂಢಿ | ಸ್ಥಂಡಿಲ |
| ಉರ್ವಿ | ಗಂಧವತಿ | ಧರಣಿ | ನಗಧರೆ | ಭುಗೋಳ | ಮಹೀಮಂಡಲ | ರೋಧಸಿ | ಸಾಗರಾಂಭಾರ |
| ಕರಣ | ಗಹ್ವರಿ | ಧರಣೀಚಕ್ರ | ನಿಪತ್ಸೆ | ಭೂತಲ | ಮಹೀತಲ | ವಲ್ಲಿ | ಸಾರಂಗ |
| ಕ್ಷಮ | ಗ್ರಹ | ಧರಣಿತಲ, | ನೆಲ | ಭೂತಧಾತ್ರಿ | ಮಾತೃ | ವಸುಂಧರ | ಸ್ಥಿರ |
| ಕ್ಷಯ | ಗೋತ್ರೆ | ಧರಣಿಮಂಡಲ | ಪರಿಗ್ರಹ | ಭೂದೇವಿ | ಮಾತೆ | ವಸುಧಾ | ಹಲಾಹಲೆ |
| ಕಾಂತಾ | ಚತುರಂತ | ಧರಾ | ಪೃಥಿ | ಭೂಮ | ಮಾಧವಿ | ವಸುಮತಿ | ಹಾಳು |
| ಕಾಶ್ಯಪ | ಜಗತಿ | ಧರಾಗ್ರ | ಪೃಥು | ಭೂಮಿಕೆ | ಮೇದಿನಿ | ವಾಸವಿ | ಹಿರಣ್ಯಗರ್ಭೆ |
| ಕ್ಷಿತಿ | ಜಮೀನ | ಧರಾತಲ | ಪ್ರಶ್ನಿ | ಭೂಮಂಡಲ | ರತ್ನಗರ್ಭ | ವಿಪುಲ | ಹೇಮಗರ್ಭೆ |